ತಕರಾರು ತೆಗೆದ. ಕೊನೆಗೆ ಜೆರಾಶ್‌ನಿಂದ ಅಜ್ಲಾನ್‌ನವರೆಗೂ ಟ್ಯಾಕ್ಸಿ ಮಾಡಿಕೊಂಡು ಹೋಗಬೇಕಾಯಿತು.

## ತಂಪು ಕೋಟೆಯ ಒಡಲ ಒಳಗೆ

ಅಜ್ಲಾನ್ ಚಿಕ್ಕದೊಂದು ಊರು. ಅದರ ಹೃದಯ ಭಾಗದಲ್ಲಿ ಔಫ್ ಬೆಟ್ಟದ ಮೇಲೆ ವಿರಾಜಮಾನವಾಗಿರುವ ಹನ್ನೆರಡನೇ ಶತಮಾನದ ಕೋಟೆ ಈ ಊರಿಗೆ ಪ್ರಾಮುಖ್ಯ ತಂದುಕೊಟ್ಟಿದೆ. ನಮ್ಮ ಬಳಿ ಇದ್ದ ಜೋರ್ಡಾನ್ ಪಾಸ್ ಬಳಸಿ ಕೋಟೆಯ ಒಳಹೊಕ್ಕೆವು. ಹೊರಗಡೆ ನೆತ್ತಿ ಸುಡುವ ಬಿಸಿಲು ಇದ್ದರೂ ಒಳಗಡೆ ತಂಪಿನ ಅನುಭವ. ಅಲ್ಲಿನ ಬರಡು ಭೂಮಿಯಲ್ಲಿ ಸಿಗುವ ಕಲ್ಲುಗಳನ್ನೇ ಆರಿಸಿ ಅವುಗಳಿಂದಲೇ ಆ ಕೋಟೆಯನ್ನು ಕಟ್ಟಲಾಗಿತ್ತು. ಬೈಜಾಂಟೈನ್ ಕಾಲದಲ್ಲಿ ಈ ಜಾಗದಲ್ಲೆಲ್ಲ ಕ್ರಿಶ್ಚಿಯಾನಿಟಿಯ ಪ್ರಭಾವ ಬಹಳವಾಗಿತ್ತು.

ಈಗಿನ ಕೋಟೆ ಇರುವ ಜಾಗದಲ್ಲಿ ಹಿಂದೊಂದು ಮೊನಾಸ್ಟರಿ ಇತ್ತು. ನಂತರದಲ್ಲಿ ಕ್ರಿಶ್ಚಿಯಾನಿಟಿಯ ಪ್ರಭಾವ ಕಡಿಮೆಯಾಗತೊಡಗಿದಾಗ ಕ್ರುಸೇಡರ್‌ಗಳು ಅಲ್ಲಲ್ಲಿ ಕೋಟೆ ಕಟ್ಟಿಕೊಂಡು ಆ ಧರ್ಮವನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡತೊಡಗಿದ್ದರು. ಅವರಿಂದ ರಕ್ಷಣೆಗೆಂದು ಅಜ್ಲಾನ್ ಕೋಟೆಯ ನಿರ್ಮಾಣವಾಯಿತು. ಇದು ಎತ್ತರದ ಗುಡ್ಡದ ಮೇಲಿರುವುದರಿಂದ ಸುತ್ತಲಿನ ಜೋರ್ಡಾನ್ ಕಣಿವೆಯ ಮೇಲೆ ಕಣ್ಣಿಡಲು ಮುಸ್ಲಿಂ ದೊರೆಗಳಿಗೆ ಸಹಾಯವಾಗುತ್ತಿತ್ತು. ಈಗಲೂ ಕೋಟೆಯ ಮೇಲೆ ಹತ್ತಿ ನಿಂತರೆ ಆ ಕಣಿವೆಗಳ ನಯನಮನೋಹರ ದೃಶ್ಯ ಗೋಚರವಾಗುತ್ತದೆ. ಇದಲ್ಲದೆ ಒಳಗೆ ಒಂದು ಸಣ್ಣ ವಸ್ತು ಸಂಗ್ರಹಾಲಯವೂ ಇದ್ದು ಆ ಜಾಗದಲ್ಲಿ ದೊರೆತ ಮಣ್ಣಿನ ಪಾತ್ರೆಗಳು, ನಾಣ್ಯಗಳು, ಆಭರಣಗಳನ್ನು ಇಲ್ಲಿ ಕಾಣಬಹುದು.

ಅಲ್ಲಿಂದ ಮಿನಿ ಬಸ್ ಹಿಡಿದು ತಲಾ ಒಂದೊಂದು ದಿನಾರ್ ಕೊಟ್ಟು ಜೆರಾಶ್‌ಗೆ ಮರಳಿದೆವು. ಅಲ್ಲಿ ಸಾವಿರಾರು ವರ್ಷ ಹಳೆಯದಾದ ಅವಶೇಷಗಳು ಗ್ರೀಕ್–ರೋಮನ್ನರ ಯುಗದ ಗತವೈಭವವನ್ನು ಸಾರುತ್ತಾ ಇಂದಿಗೂ ತಲೆ ಎತ್ತಿ ನಿಂತಿವೆ. ಮೊದಲು ಗ್ರೀಕ್ ದೊರೆ ಅಲೆಕ್ಸಾಂಡರ್‌ನ ಕೈಯಡಿಯಲ್ಲಿ ಇದ್ದ ಜೆರಾಶ್, ನಂತರ ರೋಮನ್ನರ ಕೈವಶವಾಯಿತು. ಕ್ರಿ.ಶ. 7–8 ನೇ ಶತಮಾನದವರೆಗೂ ಶ್ರೀಮಂತವಾಗಿ ಮೆರೆದಿದ್ದ ಈ ನಗರಿ 8ನೇ ಶತಮಾನದ ಹೊತ್ತಿಗೆ ಭೂಕಂಪನಕ್ಕೆ ತುತ್ತಾಯಿತು. ಆಗ ಬಹಳಷ್ಟು ಕಟ್ಟಡಗಳು ನೆಲಸಮವಾದವು. ಮುಂದೆ ನಡೆದ ಯುದ್ಧಗಳು, ಪರ್ಷಿಯನ್ನರ ಆಕ್ರಮಣ ಜೆರಾಶ್ ಅನ್ನು ಮೂಲೆಗುಂಪು ಮಾಡಿತು. ಕಾಲಕ್ರಮೇಣ ಪೂರ್ತಿ ಊರಿಗೆ ಊರೇ ನೆಲದಡಿಯಲ್ಲಿ ಹೂತು ಹೋಯಿತು.

19ನೇ ಶತಮಾನದ ಪೂರ್ವಾರ್ಧದಲ್ಲಿ ಏನೋ ಹುಡುಕಲು ಹೋಗಿದ್ದ ಜರ್ಮನ್ ದೇಶದ ಪುರಾತತ್ವ ತಜ್ಞನೊಬ್ಬ ಈ ಅದ್ಭುತ ನಗರಿಯನ್ನು ಕಂಡುಹಿಡಿದ. ನಂತರ ಹಲವಾರು ವರ್ಷಗಳ ಸತತ ಪ್ರಯತ್ನದಿಂದ ಅಲ್ಲಿನ ಬಹಳಷ್ಟು ಭಾಗಗಳನ್ನು ಸಂರಕ್ಷಿಸಲಾಯಿತು. ಇಂದು ಜೋರ್ಡಾನ್‌ನಲ್ಲಿ ಪೆಟ್ರಾದ ನಂತರ ಅತೀ ಹೆಚ್ಚು ಪ್ರವಾಸಿಗರನ್ನು ತನ್ನತ್ತ ಸೆಳೆಯುವ ಪ್ರದೇಶ ಇದಾಗಿದೆ.





ಕಾರ್ಡೋ ಮ್ಯಾಕ್ಸಿಮಸ್ ರಸ್ತೆ